ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 21/4/2021

# ಲಾಕ್ಡೌನ್ ಬೇಡ: ಮೋದಿ ಸಲಹೆ

## ಮಾರ್ಗಸೂಚಿ ಪಾಲಿಸಿದರೆ ಲಾಕ್ಡೌನ್ ಬೇಕಿಲ್ಲ

## ದೇಶವನ್ನುದ್ದೇಶಿಸಿ ಪ್ರಧಾನಮಂತ್ರಿ ಭಾಷಣ



**ಲಾಕ್‌ಡೌನ್ ಕೊನೇ ಅಸ್ತ್ರವಾಗಲಿ, ಮೈಕ್ರೋ ಕಂಟೈನ್ಮೆಂಟ್‌ಗೆ ಆದ್ಯತೆ ನೀಡಿ**

ನವದೆಹಲಿ: ಕೊರೋನಾ ವೈರಸ್‌ನ 2ನೇ ಅಲೆಯು ಭಾರೀ ಆತಂಕ ಸೃಷ್ಟಿಸಿರುವ ನಡುವೆಯೇ ಪ್ರಧಾನಿ ನರೇಂದ್ರ ಮೋದಿ ಅವರು 'ಕೊರೋನಾದ 2ನೇ ಅಲೆ ಬಿರುಗಾಳಿಯಂತೆ ಅಪ್ಪಳಿಸಿದೆ. ಆದರೆ ಮಾರ್ಗಸೂಚಿ ಪಾಲಿಸುವ ಮೂಲಕ ಈ ಅಲೆ ಎದುರಿಸಿ ಲಾಕ್‌ಡೌನ್‌ನಿಂದ ದೇಶವನ್ನು ರಕ್ಷಿಸಬೇಕು' ಎಂದು ಮನವಿ ಮಾಡಿದ್ದಾರೆ.

ಕೊರೋನಾ ಲಸಿಕೆ ಕಂಪನಿಗಳ ಜತೆ ಮಂಗಳವಾರ ಸಂಜೆ ಮಾತುಕತೆ ನಡೆಸಿದ್ದ ಮೋದಿ ರಾತ್ರಿ 8.45ಕ್ಕೆ 20 ನಿಮಿಷ ದೇಶ ಉದ್ದೇಶಿಸಿ ಮಾತನಾಡಿದದರು.

1/2

# ಲಾಕ್ಡೌನ್ ಬೇಡ: ಮೋದಿ

ಮೊದಲ ಪುಟದಿಂದ

'ನಾವೆಲ್ಲರೂ ಕೋವಿಡ್-19 ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಮತ್ತೊಮ್ಮೆ ಲಾಕ್‌ಡೌನ್ ಅನಿವಾರ್ಯತೆ ಉದ್ಭವಿಸದು. ದೇಶವನ್ನು ಲಾಕ್ ಡೌನ್‌ನಿಂದ ತಪ್ಪಿಸಬೇಕಿದೆ. ಸೋಂಕು ನಿಯಂತ್ರಣಕ್ಕೆ ಲಾಕ್‌ಡೌನ್ ಕೊನೇ ಅಸ್ತ್ರವಾಗಬೇಕು. ರಾಜ್ಯಗಳು ಮೈಕ್ರೋ ಕಂಟೈನ್‌ಮೆಂಟ್‌ಗೆ ಒತ್ತು ನೀಡಿ ಸೋಂಕು ನಿಯಂತ್ರಿಸಬೇಕು' ಎಂದರು. 'ವೈರಸ್‌ನ 2 ಅಲೆಯು ದೇಶಕ್ಕೆ ಬಿರುಗಾಳಿಯಂತೆ ಅಪ್ಪಳಿಸಿದೆ. ನಮ್ಮ ಮುಂದಿರುವ ಬಹುದೊಡ್ಡ ಸವಾಲು ಇದಾಗಿದೆ. ದೇಶದ ಹಲವೆಡೆ ವೈದ್ಯಕೀಯ ಆಮ್ಲಜನಕದ ಕೊರತೆ ಎದುರಾಗಿದೆ. ಈ ಸಮಸ್ಯೆ ನಿವಾರಣೆಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಎದೆಗುಂದದೆ ಹೋರಾಡಿದರೆ ನಮಗೆ ಜಯ ಸಿಗಲಿದೆ' ಎಂದರು.

**ನಮ್ಮಲ್ಲಿ ಎಲ್ಲಾ ವ್ಯವಸ್ಥೆ ಇದೆ:** 'ಕಳೆದ ವರ್ಷ (2020)ರಲ್ಲಿ ದೇಶದಲ್ಲಿ ಕೊರೋನಾ ವ್ಯಾಪಿಸಿದ್ದಾಗ ಸೋಂಕು ಎದುರಿಸಲು ಬೇಕಾದ ವೈದ್ಯಕೀಯ ಮೂಲಸೌಕರ್ಯ ಇರಲಿಲ್ಲ. ಆದರೆ ಇಂದು ಪಿಪಿಇ ಕಿಟ್‌ಗಳು, ಪ್ರಯೋಗಾಲಯ, ಲಸಿಕೆ ಸೇರಿದಂತೆ ಎಲ್ಲಾ ಸೌಲಭ್ಯ ಇದೆ. ಸೋಂಕು ಎದುರಿಸಲು ದೇಶ ಸಿದ್ಧವಾಗಿದೆ' ಎಂದರು.

**ಲಸಿಕಾ ಅಭಿಯಾನ ಯಶಸ್ವಿಗೆ ಕರೆ:** 'ನಮ್ಮ ವಿಜ್ಞಾನಿಗಳು 2 ಲಸಿಕೆಗಳನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಅಭಿವೃದ್ಧಿಪಡಿಸಿದ್ದಾರೆ. ಈ ಲಸಿಕೆಗಳು ದೇಶದ ಪ್ರತೀ ಮೂಲೆ ಮತ್ತು ಅಗತ್ಯವಿರುವವರೆಲ್ಲರಿಗೂ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗಿದೆ. ಬಡವರಿಗೆ ಉಚಿತ ಲಸಿಕೆ ಸೌಲಭ್ಯ ಮುಂದುವರಿಯಲಿದೆ. ಲಸಿಕಾ ಕಂಪನಿಗಳು ಉತ್ಪಾದನೆ ಹೆಚ್ಚಿಸಬೇಕು. ಕೇಂದ್ರ ಸರ್ಕಾರ ಎಲ್ಲ ನೆರವು ನೀಡಲಿದೆ' ಎಂದು ಅಭಯ ನೀಡಿದರು.

**ನಗರ ತೊರೆವುದು ಬೇಡ:** ಸೋಂಕಿನ ಕಾರಣ ಗೊಂದಲಕ್ಕೀಡಾದ ವಲಸೆ ಕಾರ್ಮಿಕರು ತಮ್ಮ ಸ್ವಗ್ರಾಮಗಳತ್ತ ಮುಖ ಮಾಡುತ್ತಿದ್ದಾರೆ. ಹಾಗಾಗಬಾರದು. ಇರುವಲ್ಲೇ ಇರಬೇಕು ಎಂದು ಕೋರಿದರು.